# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1296** |
| ಸದಸ್ಯರ ಹೆಸರು | : | ಶ್ರೀ ಕೆ.ಎ.ತಿಪ್ಪೇಸ್ವಾಮಿ<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | **15.03.2021** |
| ಉತ್ತರಿಸುವ ಸಚಿವರು | : | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೇಂದ್ರ ಸರ್ಕಾರದ 2021-22ನೇ ಸಾಲಿನ ಆಯವ್ಯಯದಲ್ಲಿ "ಸಮಗ್ರ ಶಿಕ್ಷಣ ಅಭಿಯಾನ" ಅಡಿ ಒದಗಿಸಿರುವ ಅನುದಾನವು ಕಳೆದ ವರ್ಷಕ್ಕಿಂತ ಬಹಳಷ್ಟು ಕಡಿತಗೊಳಿಸಿರುವುದು ರಾಜ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ;(ಸಂಪೂರ್ಣ ವಿವರ ನೀಡುವುದು) | ಇಲ್ಲ<br>• ಕೇಂದ್ರ ಸರ್ಕಾರವು 2020-21ನೇ ಸಾಲಿನಲ್ಲಿ ಸಮಗ್ರ ಶಿಕ್ಷಣ-ಕರ್ನಾಟಕ ಯೋಜನೆಯಡಿ ರೂ.27957.32 ಕೋಟಿ ಅನುದಾನವನ್ನು ಒದಗಿಸಿರುತ್ತಾರೆ.<br>• 2021-22ನೇ ಸಾಲಿನ ಆಯವ್ಯಯದಲ್ಲಿ ಸಮಗ್ರ ಶಿಕ್ಷಣ-ಕರ್ನಾಟಕ ಯೋಜನೆಯಡಿ ರೂ.31050.16 ಕೋಟಿ ಅನುದಾನ ಒದಗಿಸಲಾಗಿರುತ್ತದೆ. (ವಿವರವನ್ನು **ಅನುಬಂಧ-1**ರಲ್ಲಿ ಒದಗಿಸಿದೆ) |
| ಆ) | ಅದರಂತೆ, ಕೇಂದ್ರ ಸರ್ಕಾರ ಪ್ರಸಕ್ತ ಆಯವ್ಯಯದಲ್ಲಿ "ರಾಷ್ಟ್ರೀಯ ಯೋಜನೆ ಹೆಣ್ಣು ಮಗುವಿನ ಹೈಸ್ಕೂಲ್ ವಿದ್ಯಾಭ್ಯಾಸದ ಉತ್ತೇಜನ" ಅಡಿಯಲ್ಲಿ ಸಹ ಭಾರಿ ಪ್ರಮಾಣದಲ್ಲಿ ಅನುದಾನ ಕಡಿತಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಕೇಂದ್ರ ಸಹಭಾಗಿತ್ವದ ಸಮಗ್ರ ಶಿಕ್ಷಣ-ಕರ್ನಾಟಕಯಡಿಯಲ್ಲಿ "ರಾಷ್ಟ್ರೀಯ ಯೋಜನೆ ಹೆಣ್ಣು ಮಗುವಿನ ಹೈಸ್ಕೂಲ್ ವಿದ್ಯಾಭ್ಯಾಸದ ಉತ್ತೇಜನ" ಎಂಬ ಕಾರ್ಯಕ್ರಮ ಜಾರಿಯಲ್ಲಿರುವುದಿಲ್ಲ.<br>2020-21ನೇ ಸಾಲಿನಲ್ಲಿ ಹೆಣ್ಣು ಮಕ್ಕಳ ಶಿಕ್ಷಣ ಉತ್ತೇಜನಕ್ಕಾಗಿ ಶಿಕ್ಷಣ ಮಂತ್ರಾಲಯವು ಪಿ.ಎ.ಬಿ ಸಭಾ ನಡವಳಿಯಲ್ಲಿ ಅನುಮೋದನೆಗೊಂಡ ಚಟುವಟಿಕೆಗಳಡಿಯಲ್ಲಿ ಈ ಕೆಳಕಂಡ ಚಟುವಟಿಕೆಗಳು ಅನುಷ್ಠಾನವಾಗಿರುತ್ತವೆ.<br>1. 6 ರಿಂದ 8ನೇ ತರಗತಿ ವಿದ್ಯಾರ್ಥಿನಿಯರಿಗೆ 71 ಕಸ್ತೂರ್ ಬಾ ಗಾಂಧಿ ವಸತಿ ಶಾಲೆಗಳು ಪ್ರಾರಂಭವಾಗಿವೆ.<br>2. 9 ರಿಂದ 10ನೇ ತರಗತಿ ವಿದ್ಯಾರ್ಥಿನಿಯರಿಗೆ 74 ಕಸ್ತೂರ್ ಬಾ ಗಾಂಧಿ ವಸತಿ ನಿಲಯಗಳು ಪ್ರಾರಂಭವಾಗಿವೆ. (ವಿವರವನ್ನು **ಅನುಬಂಧ-2**ರಲ್ಲಿ ಒದಗಿಸಿದೆ) |
| ಇ) | ಈ ರೀತಿ ಆಯವ್ಯಯದಲ್ಲಿ ಕೊರತೆ ಉಂಟು ಮಾಡುವ ಮುನ್ನ ಕೇಂದ್ರ-ರಾಜ್ಯ ಸರ್ಕಾರಗಳು ಯಾವುದಾದರೂ ಸಮೀಕ್ಷೆ/ಗಣತಿ ಕೈಗೊಂಡಿವೇ: (ವಿವರ ನೀಡುವುದು) | ಉದ್ಭವಿಸುವುದಿಲ್ಲ |

| | | |
|---|---|---|
| ಈ) | ಹಾಗಿದ್ದಲ್ಲಿ, ಈ ಉಭಯ ಯೋಜನೆಗಳ ಅಡಿ ಕೇಂದ್ರ ಸರ್ಕಾರದಿಂದ ನಿಡುವ ಖೋತಾ ಆರ್ಥಿಕ ನೆರವು ಮೀಗಿಸಲು ರಾಜ್ಯ ಸರ್ಕಾರ ಪ್ರಸಕ್ತ ಆಯವ್ಯಯದಲ್ಲಿ ಅಗತ್ಯವಿರುವ ಅನುದಾನ ಒದಗಿಸಿ, ಮೇಲ್ಕಂಡ ಮಹತ್ವಾಕಾಂಕ್ಷೆ ಯೋಜನೆಗಳನ್ನು ಮುನ್ನಡೆಸುವುದೇ? (ವಿವರ ನೀಡುವುದು) | ಉದ್ಭವಿಸುವುದಿಲ್ಲ |

**ಇಪಿ 47 ಯೋಸಕ 2021**

(ಎಸ್.ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

(in ₹ crores)

| | Actual 2019-2020 | | | Budget 2020-2021 | | | Revised 2020-2021 | | | Budget 2021-2022 | | |
|---|---|---|---|---|---|---|---|---|---|---|---|---|
| | Revenue | Capital | Total | Revenue | Capital | Total | Revenue | Capital | Total | Revenue | Capital | Total |
| **National Education Mission** | | | | | | | | | | | | |
| 20. *Samagra Shiksha* | | | | | | | | | | | | |
| 20.01 Support for Samagra Shiksha | ... | ... | ... | ... | ... | ... | ... | ... | ... | 31050.15 | ... | 31050.15 |
| 20.02 EAP Component | 2.50 | ... | 2.50 | 5.01 | ... | 5.01 | ... | ... | ... | 0.01 | ... | 0.01 |
| 20.03 Support from Gross Budgetary Support (GBS) | 10510.20 | ... | 10510.20 | 10242.36 | ... | 10242.36 | 1216.42 | ... | 1216.42 | ... | ... | ... |
| 20.04 Support from Prarambhik Shiksha Kosh | 18372.41 | ... | 18372.41 | 23136.01 | ... | 23136.01 | 23473.78 | ... | 23473.78 | ... | ... | ... |
| 20.05 Support from Madhyamik and Uchhatar Shiksha Kosh | 3491.41 | ... | 3491.41 | 5367.12 | ... | 5367.12 | 3267.12 | .. | 3267.12 | ... | ... | .. |
| *Total- Samagra Shiksha* | *32376.52* | ... | *32376.52* | *38750.50* | ... | *38750.50* | *27957.32* | ... | *27957.32* | *31050.16* | ... | *31050.16* |
| 21. *Teachers Training and Adult Education* | | | | | | | | | | | | |
| 21.01 Padhna Likhna Abhiyan | ... | ... | ... | 10.00 | ... | 10.00 | 95.25 | ... | 95.25 | 250.00 | ... | 250.00 |
| 21.02 Appointment of Language Teachers | ... | ... | ... | 100.00 | ... | 100.00 | 25.00 | ... | 25.00 | ... | ... | ... |
| *Total- Teachers Training and Adult Education* | ... | ... | ... | *110.00* | ... | *110.00* | *120.25* | .. | *120.25* | *250.00* | ... | *250.00* |
| **Total-National Education Mission** | **32376.52** | ... | **32376.52** | **38860.50** | ... | **38860.50** | **28077.57** | ... | **28077.57** | **31300.16** | ... | **31300.16** |
| **National Programme of Mid Day Meal in Schools** | | | | | | | | | | | | |
| 22. *National Programme of Mid Day Meal in Schools* | | | | | | | | | | | | |
| 22.01 Support for National Programme of Mid Day Meal in Schools | ... | ... | ... | ... | ... | ... | ... | ... | ... | 11500.00 | ... | 11500.00 |
| 22.02 Support from Gross Budgetary Support | 1223.06 | ... | 1223.06 | 2323.89 | ... | 2323.89 | 1373.78 | ... | 1373.78 | ... | ... | ... |
| 22.03 Support from Prarambhik Shiksha Kosh | 8475.94 | ... | 8475.94 | 8676.11 | ... | 8676.11 | 11526.22 | ... | 11526.22 | ... | ... | ... |
| *Total- National Programme of Mid Day Meal in Schools* | *9699.00* | ... | *9699.00* | *11000.00* | ... | *11000.00* | *12900.00* | ... | *12900.00* | *11500.00* | ... | *11500.00* |
| 23. Transfer to Prarambhik Shiksha Kosh (PSK) | 26848.35 | ... | 26848.35 | 31812.12 | ... | 31812.12 | 35000.00 | ... | 35000.00 | 37000.00 | ... | 37000.00 |
| 24. Amount met from Prarambhik Shiksha Kosh (PSK) | -26848.36 | ... | -26848.36 | -31812.12 | ... | -31812.12 | -35000.00 | ... | -35000.00 | -37000.00 | ... | -37000.00 |
| **Umbrella Programme for Development of Minorities** | | | | | | | | | | | | |
| 25. Education Scheme for Madrasas and Minorities | 70.94 | ... | 70.94 | 220.00 | ... | 220.00 | 310.22 | ... | 310.22 | ... | ... | ... |
| 26. Strengthening Teaching-Learning and Results for States (STARS)-EAP | ... | ... | ... | ... | ... | ... | 111.79 | ... | 111.79 | 485.00 | ... | 485.00 |
| **Total-Centrally Sponsored Schemes** | **42146.45** | ... | **42146.45** | **50080.50** | ... | **50080.50** | **41399.58** | ... | **41399.58** | **43285.16** | ... | **43285.16** |
| **Other Grants/Loans/Transfers** | | | | | | | | | | | | |
| 27. Actual Recoveries | -73.05 | ... | -73.05 | ... | ... | ... | ... | ... | ... | ... | ... | ... |
| ***Grand Total*** | ***52520.19*** | ... | ***52520.19*** | ***59845.00*** | ... | ***59845.00*** | ***52189.07*** | ... | ***52189.07*** | ***54873.66*** | ... | ***54873.66*** |
| B. Developmental Heads | | | | | | | | | | | | |
| Social Services | | | | | | | | | | | | |
| 1. General Education | 11012.46 | ... | 11012.46 | 15471.18 | ... | 15471.18 | 14037.07 | ... | 14037.07 | 15127.77 | ... | 15127.77 |

ಅನುಬಂಧ-೨ ಅನುಬಂಧ-೨

ಸಮಗ್ರ ಶಿಕ್ಷಣ ಯೋಜನೆಯಡಿ "ರಾಷ್ಟ್ರೀಯ ಯೋಜನೆ ಹೆಣ್ಣು ಮಗುವಿನ ಹೈಸ್ಕೂಲ್ ವಿದ್ಯಾಭ್ಯಾಸದ ಉತ್ತೇಜನ" ಇದರ ವಿವರ

ಕರ್ನಾಟಕ ರಾಜ್ಯದಲ್ಲಿ 71 ಕೆಜಿಬಿವಿ ವಸತಿ ಶಾಲೆಗಳು, 74 ಕೆಜಿಬಿವಿ ವಸತಿ ನಿಲಯಗಳು ಹಾಗೂ 86 ಕರ್ನಾಟಕ-ಕೆಜಿಬಿವಿ ವಸತಿ ನಿಲಯಗಳವೆ ಈ ಇದಕ್ಕೆ ಸಂಬಂಧಿಸಿದಂತೆ ಶಾಖೆಯಲ್ಲಿ ಈ ಕೆಳಗಿನ ಚಟುವಟಿಕೆಗಳಿಗಾಗಿ ಉಪಯೋಗಿಸಬಹುದಾಗಿರುತ್ತದೆ.

- 2004-05ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಯೋಜನೆಯಡಿ ಕೆಜಿಬಿವಿ ವಸತಿ ಶಾಲೆಗಳು ಹಾಗೂ 2009-10ನೇ ಸಾಲಿಗೆ ಕೆಜಿಬಿವಿ ಟೈಪ್-4 ವಸತಿ ನಿಲಯಗಳು ಮಂಜೂರಾಗಿದೆ.
- ಕೆಜಿಬಿವಿ ವಸತಿ ಶಾಲೆಗಳಾಗಿದ್ದು, 6 ರಿಂದ 8ನೇ ತರಗತಿಯ ವರೆಗೆ ಪ್ರವೇಶಾವಕಾಶ ಇರುತ್ತದೆ. ಶಾಲೆಯಿಂದ ಹೊರಗುಳಿದ ಹೆಣ್ಣು ಮಕ್ಕಳಿಗೆ ಪ್ರವೇಶದಲ್ಲಿ ಆದ್ಯತೆ ನೀಡಲಾಗುತ್ತಿದೆ. ಪ.ಜಾ/ಪ.ಪ. ಹಿಂದುಳಿದ ವರ್ಗ, ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಮಕ್ಕಳಿಗೆ 75% ರಷ್ಟು ಮತ್ತು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಬಾಲಕಿಯರಿಗೆ, ಅನಾಥ ಹೆಣ್ಣು ಮಕ್ಕಳು, ಬಾಲ ಕಾರ್ಮಿಕ ಮಕ್ಕಳ ಶಿಕ್ಷಣ ವಂಚಿತ ಹೆಣ್ಣು ಮಕ್ಕಳಿಗೆ 25% ರಷ್ಟು ಪ್ರವೇಶದಲ್ಲಿ ಮೀಸಲಾತಿಯನ್ನು ನೀಡಲಾಗುತ್ತಿದೆ.
- ಕೆಜಿಬಿವಿ ಟೈಪ್-4 ವಸತಿ ನಿಲಯಗಳಲ್ಲಿ 9 ರಿಂದ 12ನೇ ತರಗತಿಯ ವರೆಗೆ ಪ್ರವೇಶಾವಕಾಶ ಇರುತ್ತದೆ. ಕಸ್ತೂರ ಬಾ ಬಾಲಿಕ ವಸತಿ ಶಾಲೆಯಿಂದ 8ನೇ ತರಗತಿ ವ್ಯಾಸಂಗ ಪೂರೈಸಿರುವ ವಿದ್ಯಾರ್ಥಿನಿಯರಿಗೆ ಸದರಿ ವಸತಿ ನಿಲಯದಲ್ಲಿ ದಾಖಲಾತಿಗೆ ಅವಕಾಶ ಮಾಡಿಕೊಡುವುದು. ಪ.ಜಾ/ಪ.ಪ. ಹಿಂದುಳಿದ ವರ್ಗ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಹೆಣ್ಣು ಮಕ್ಕಳಿಗೆ 75% ರಷ್ಟು ಮತ್ತು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಬಾಲಕಿಯರಿಗೆ, ಅನಾಥ ಹೆಣ್ಣು ಮಕ್ಕಳು, ಬಾಲಕಾರ್ಮಿಕ ಮಕ್ಕಳ ಶಿಕ್ಷಣ ವಮಚಿತ ಹೆಣ್ಣು ಮಕ್ಕಳಿಗೆ 25%ರಷ್ಟು ಪ್ರವೇಶದಲ್ಲಿ ಮೀಸಲಾತಿಯನ್ನು ನೀಡಲಾಗುತ್ತಿದೆ.
- ಕೆಜಿಬಿವಿ ವಸತಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣದ ಜೊತೆಗೆ ಮಕ್ಕಳಿಗೆ ಕ್ರೀಡೆ, ಜೀವನ ಕೌಶಲ ಹಾಗೂ ಸ್ವಯಂ ರಕ್ಷಣಾ ಕೌಶಲ ಕುರಿತ ತರಬೇತಿಯನ್ನು ನೀಡುತ್ತಿರುವ ಬಗ್ಗೆ ತಿಳಿಸುವುದು.